# बेंगलूरु मेट्रो 2

# पर्यावरण संरक्षण में युवाओं की भूमिका अहम

बेंगलूरु में सोमवार को ज्ञानज्योति सभागार में जैव विविधता कार्यक्रम का उदघाटन करते बेंगलूरु विश्वविद्यालय के कुलपति डॉ. एन प्रभुदेव। पत्रिका



**कार्यालय संवाददाता**
**बेंगलूरु, 12 अक्टूबर।**

पर्यावरण प्रदूषण में लगातार हो रहे वृद्धि को नियंत्रित करना ही होगा। इस कार्य में जन-जन को आगे आकर सहभागिता निभानी होगी। खासकर युवाओं व विद्यार्थियों को इस पर्यावरण बचाओ अभियान में महती भूमिका निभानी चाहिए।

यहां सोमवार को बेंगलूरु विश्वविद्यालय के जुलोजी विभाग के शताब्दी दिवस के अवसर पर आयोजित जैव विविधता जागरूकता, संरक्षण व ज्ञानकारी विषयक कार्यशाला में बतौर कार्यक्रम अध्यक्ष विश्वविद्यालय के कुलपति डॉ. एन प्रभुदेव ने यह बात कही। उन्होंने कहा कि आम लोगों को पर्यावरण परिशोधन व सुरक्षा के बारे में जानकारी व प्रेरणा देना है। यह कार्यशाला इस इस उद्देश्य को पूरा करने में मददगार साबित होगा। उन्होंने कहा कि जैव विविधता के संरक्षण की दिशा में विश्वविद्यालय ने पहले भी कदम उठाए हैं, जिसका सकारात्मक प्रभाव भी हुआ है।

बेंगलूरु कृषि विश्वविद्यालय के पूर्व कुलपति डॉ. केवी देवराज ने कहा कि पर्यावरण सुरक्षा व संरक्षण आज की दुनिया के सामने बड़ी चुनौती है। इस चुनौती का मुकाबला हम सभी को मिलकर करना होगा।

उन्होंने कहा कि बाजार में प्लास्टिक की वस्तुओं व प्लास्टिक का इस्तेमाल बेतहाशा बढ़ रहा है। जबकि प्लास्टिक ना केवल जनस्वास्थ्य के लिए आवश्यक है, बल्कि पर्यावरण प्रदूषण में इसकी बड़ी भूमिका होती है। उन्होंने कहा कि डॉलफिन मछली जो जल को परिशोधित करने की क्षमता रखती है, की संख्या घटती जा रही है। ऐसी तमाम प्राकृतिक व्यवस्थाएं लुप्त होने के कगार पर हैं। इन चीजों पर हमें विचार करना होगा।

कार्यक्रम में धारवाड़ के कृषि विश्वविद्यालय के पूर्व कुलपति डॉ. एम महादेवप्पा ने जैव विविधता, जागरूकता एवं उपयोगिता नामक पुस्तक का विमोचन किया। कार्यक्रम में आंध्रप्रदेश विश्वविद्यालय के पर्यावरण विज्ञान विभाग के प्रमुख डॉ. एजे सोलोमन राजू, तिरुपति विश्वविद्यालय के जुलोजी विभाग के प्रोफेसर डॉ. राजरमी रेड्डी व अन्य विशेषज्ञों ने अपने विचार व्यक्त किए।

# ಅಂಗಾಂಶ ಕೃಷಿ: ಕೋರ್ಸ್ ಆರಂಭಕ್ಕೆ ಚಿಂತನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗ ಸೋಮವಾರ ಸೆಂಟ್ರಲ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಜೈವಿಕ ವೈವಿಧ್ಯ ಜಾಗೃತಿ, ಸಂರಕ್ಷಣೆ ಮತ್ತು ಬಳಕೆ ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಎನ್. ಪ್ರಭುದೇವ್, ಬೆಂಗಳೂರು ಕೃಷಿ ವಿವಿಯ ವಿಶ್ರಾಂತ ಕುಲಪತಿ ಡಾ. ಕೆ.ವಿ.ದೇವರಾಜ್, ಧಾರವಾಡ ಕೃಷಿ ವಿ.ವಿ. ವಿಶ್ರಾಂತ ಕುಲಪತಿ ಡಾ.ಎಂ.ಮಹದೇವಪ್ಪ ಭಾಗವಹಿಸಿದ್ದರು. - ಪ್ರಜಾವಾಣಿ ಚಿತ್ರ

**ಬೆಂಗಳೂರು:** ಅಂಗಾಂಶ ಕೃಷಿ, ನೀರಿನ ಗುಣಮಟ್ಟ ಮತ್ತು ನಿರ್ವಹಣೆ, ಕೀಟಗಳಿಂದ ಬರುವ ಕಾಯಿಲೆಗಳು, ಪ್ರಾಣಿಗಳ ಪೌಷ್ಟಿಕತೆ ಇತ್ಯಾದಿ ವಿಷಯಗಳಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸುವ ಬಗ್ಗೆ ಪ್ರಾಣಿಶಾಸ್ತ್ರ ವಿಭಾಗ ಚಿಂತನೆ ನಡೆಸಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಎನ್. ಪ್ರಭುದೇವ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗ ಸೋಮವಾರ ಇಲ್ಲಿ ಏರ್ಪಡಿಸಿದ್ದ ಜೈವಿಕ ವೈವಿಧ್ಯ ಜಾಗೃತಿ, ಸಂರಕ್ಷಣೆ ಮತ್ತು ಬಳಕೆ ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ರೀತಿಯ ಕೋರ್ಸ್‌ಗಳನ್ನು ಆರಂಭಿಸುವುದರಿಂದ ಸ್ವಯಂ ಉದ್ಯೋಗ ಸೃಷ್ಟಿಸಲು ಅನುಕೂಲವಾಗಲಿದೆ ಎಂದರು.

ಪ್ರಾಣಿಶಾಸ್ತ್ರ ವಿಭಾಗವು ಜೀವವೈವಿಧ್ಯಗಳ ಸಂರಕ್ಷಣೆ, ಅರಿವು ಮೂಡಿಸುವುದು, ಔಷಧಿಯ ಸಸ್ಯಗಳು, ಪ್ರಾಣಿಗಳನ್ನು ಗುರುತಿಸಿ ಸಂರಕ್ಷಿಸುವ ಕಾರ್ಯದಲ್ಲಿ ತೊಡಗಬೇಕು ಎಂದು ಕರೆ ನೀಡಿದರು.

ಬೆಂಗಳೂರು ವಿಶ್ವವಿದ್ಯಾಲಯವು ಕೆಲವು ವರ್ಷಗಳ ಹಿಂದೆ ಆರಂಭಿಸಿರುವ ಜೈವಿಕ ಉದ್ಯಾನವನದಲ್ಲಿ ಹಲವಾರು ಔಷಧಿಯ ಸಸ್ಯಗಳನ್ನು ಬೆಳೆಸಿದೆ. ಅಲ್ಲದೆ ಹಲಸಿನ ಹಣ್ಣು ಸೇರಿದಂತೆ ವಿವಿಧ ರೀತಿಯ ಅಪರೂಪದ ಹಣ್ಣಿನ ಗಿಡಗಳನ್ನು ಬೆಳೆಸಲಾಗುತ್ತಿದೆ. ಈ ರೀತಿಯ ಉದ್ಯಾನವನಗಳನ್ನು ಬೇರೆ ಕಡೆ ಬೆಳೆಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಕಾರ್ಯಾಗಾರದ ಕೈಪಿಡಿಯನ್ನು ಬಿಡುಗಡೆ ಮಾಡಿದ ಬೆಂಗಳೂರು ಕೃಷಿ ವಿವಿಯ ವಿಶ್ರಾಂತ ಕುಲಪತಿ ಡಾ. ಕೆ.ವಿ.ದೇವರಾಜ್, ಪ್ಲಾಸ್ಟಿಕ್ ಬಳಕೆ, ಕಾರ್ಬನ್ ಡೈಆಕ್ಸೈಡ್‌ನಿಂದಾಗಿ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ನಿತ್ಯ ಪರಿಸರ ಹಾಳಾಗುತ್ತಿರುವ ವಿಷಯದತ್ತ ಹೆಚ್ಚು ಗಮನಹರಿಸುವುದರ ಜೊತೆಗೆ ಜೀವವೈವಿಧ್ಯ ಸಂರಕ್ಷಣೆಗೆ ಮಹತ್ವ ನೀಡಬೇಕು ಎಂದು ಕರೆ ನೀಡಿದರು.

ಕಾರ್ಯಾಗಾರದ ಸಿ.ಡಿ.ಬಿಡುಗಡೆ ಮಾಡಿದ ಧಾರವಾಡ ಕೃಷಿ ವಿ.ವಿ. ವಿಶ್ರಾಂತ ಕುಲಪತಿ ಡಾ. ಎಂ. ಮಹದೇವಪ್ಪ, ಪಾರ್ಥೇನಿಯಂನಿಂದ ಪರಿಸರದ ಮೇಲೆ ಬೀರುತ್ತಿರುವ ಪರಿಣಾಮಗಳ ಬಗ್ಗೆ ಅರಿವಿಲ್ಲ. ಈ ಬಗ್ಗೆ ಅರಿವು ಮೂಡಿಸಬೇಕಿದೆ ಎಂದರು. ಕುಲಸಚಿವ ಡಾ.ಟಿ.ಆರ್.ಸುಬ್ರಹ್ಮಣ್ಯ, ಪ್ರಾಣಿಶಾಸ್ತ್ರ ವಿಭಾಗದ ಡಾ.ಎಂ. ರಾಮಚಂದ್ರ ಮೋಹನ್, ಕಾರ್ಯಾಗಾರದ ಸಂಚಾಲಕ ಡಾ.ಎಂ.ಶಂಕರ ರೆಡ್ಡಿ ಉಪಸ್ಥಿತರಿದ್ದರು.

TIMES OF INDIA

## BU Zoology dept turns 100

13.10.2009

**Bangalore:** The department of zoology, Bangalore University turned 100 on Monday. To celebrate the occasion, it conducted a national workshop on 'Biodiversity awareness, conservation and utility', in the Jnana Jyothi auditorium, Central College.

Dr N Prabhu Dev, vice-chancellor, inaugurated the two-day event that will conclude on Tuesday.



ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಪ್ರಾಣಿಶಾಸ್ತ್ರ ವಿಭಾಗ ಏರ್ಪಡಿಸಿದ್ದ ಬಯೋಡೈವರ್ಸಿಟಿ ಎಂಬ ರಾಷ್ಟ್ರ ಮಟ್ಟದ ಕಾರ್ಯಾಗಾರವನ್ನು ಬೆಂಗಳೂರು ವಿವಿ ಕುಲಪತಿ ಡಾ.ಪ್ರಭುದೇವ್ ಉದ್ಘಾಟಿಸಿದರು. ವಿಶ್ರಾಂತ ಕುಲಪತಿಗಳಾದ ಎಂ.ಮಹದೇವಪ್ಪ, ಕೆ.ವಿ.ದೇವರಾಜ್, ಪ್ರೊ.ಸೊಲಮನ್ ರಾಜು ಮತ್ತಿತರರಿದ್ದರು.

12.10.2009 ಈ ಸಂಜೆ.

ಸಂಯುಕ್ತ ಕರ್ನಾಟಕ
ಊರು ಕೇರಿ
13-10-2009 ನಗರ

# ಪರಿಸರ ಪೋಷಣೆಯಿಂದ ಮಾನವನ ಉಳಿವು

ಬೆಂಗಳೂರು, ಅ. 12: ಮಾನವ ಸಂತತಿ ಉಳಿವಿಕೆಯು ಪ್ರಾಣಿ ಮತ್ತು ಸಸ್ಯ ವರ್ಗಗಳ ಮೇಲೆ ಅವಲಂಬಿತವಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ಡಾ. ಎನ್. ಪ್ರಭುದೇವ್ ಅಭಿಪ್ರಾಯ ಪಟ್ಟಿದ್ದಾರೆ.

ನಗರದಲ್ಲಿ ಜ್ಞಾನಭಾರತಿ ಜೀವಶಾಸ್ತ್ರ ವಿಭಾಗದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಜೀವವೈವಿಧ್ಯತೆ ಅರಿವು, ಉಳಿವು ಮತ್ತು ಉಪಯುಕ್ತತೆ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜೀವವೈವಿಧ್ಯತೆ ಜೀವನದ ಒಂದು ಭಾಗ ಅದರಲ್ಲಿರುವ ಅನೇಕ ಸಂಪನ್ಮೂಲಗಳ ಮೇಲೆ ಮುಂದಿನ ಪೀಳಿಗೆ ಅವಲಂಬಿತವಾಗಿದೆ ಎಂದು ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಡಾ. ಕೆ. ವಿ. ದೇವರಾಜ್ ಮಾತನಾಡಿ, ಇಂದು ಪರಿಸರ ಸಮತೋಲನ ಬಹಳ ಅವಶ್ಯಕವಾಗಿದೆ. ಜೀವ ವೈವಿಧ್ಯತೆಯಲ್ಲಿ ನೀರಿನಾಂಶ, ಇಂಧನ, ಪರಿಸರ ವಿಕೋಪ, ಪ್ರವಾಹ, ಬರ ಮತ್ತು ಆಹಾರ ಕೊರತೆ ಮನುಷ್ಯ ಚಟುವಟಿಕೆಯಿಂದಾಗುತ್ತದೆ. ಪರಿಸರವನ್ನು ಪೋಷಿಸಿದರೆ ಮಾನವನ ಉಳಿವಿಕೆಗೆ ಅದು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗೌರವಾನ್ವಿತ ವಿಜ್ಞಾನಿ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಡಾ. ರಾಮಚಂದ್ರ ಮೋಹನ್, ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರವಚಕಿ ಬೇಲಾ ಜುಟ್ಷಿ ಮತ್ತು ಡಾ. ನಾಗರಾಜ್ ಅವರನ್ನು ಗೌರವಿಸಲಾಯಿತು.




*ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ ಜೈವಿಕ ವೈವಿಧ್ಯ ಕುರಿತು ಕಾರ್ಯಾಗಾರದಲ್ಲಿ ಕುಲಪತಿ ಡಾ. ಎನ್. ಪ್ರಭುದೇವ್ 2009ನೇ ಸಾಲಿನ ಅತ್ಯುತ್ತಮ ವಿಜ್ಞಾನಿ ಪ್ರಶಸ್ತಿ ಪಡೆದ ಡಾ. ಬೇಲಾಜುಟ್ಷಿ ಅವರನ್ನು ಸನ್ಮಾನಿಸಿದರು. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಡಾ. ಮಹದೇವಪ್ಪ, ಆಂಧ್ರ ವಿಶ್ವವಿದ್ಯಾನಿಲಯದ ಡಾ. ಸೋಲಮನ್‌ರಾಜು, ಬೆಂಗಳೂರು ವಿಶ್ವವಿದ್ಯಾನಿಲಯದ ಕುಲ ಸಚಿವ ಡಾ. ಟಿ. ಆರ್. ಸುಬ್ರಮಣ್ಯ, ಪ್ರವಚಕ ಡಾ. ಶಂಕರ್‌ರೆಡ್ಡಿ ಉಪಸ್ಥಿತರಿದ್ದರು.*

# ಜೀವ ವೈವಿಧ್ಯಗಳ ರಕ್ಷಣೆ: ಜನ ಜಾಗೃತಿಗೆ ಕರೆ

ಟೈಮ್ಸ್ ನ್ಯೂಸ್ ನೆಟ್‌ವರ್ಕ್

**ಬೆಂಗಳೂರು:** ಜೀವ ವೈವಿಧ್ಯಗಳ ಆಹಾರ ಮತ್ತು ಹವಾಮಾನ ಬಗ್ಗೆ ಜನ ಜಾಗೃತಿ ಮೂಡಿಸಬೇಕಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ.ಎನ್. ಪ್ರಭುದೇವ್ ಹೇಳಿದರು.

ಜೀವನೋಪಾಯಕ್ಕಾಗಿ ಅರಣ್ಯ ಉತ್ಪನ್ನವನ್ನೇ ನಂಬಿರುವ ಆದಿವಾಸಿ ಜನರಿಗೆ ಸಸ್ಯ ಪ್ರಭೇದಗಳು ಮತ್ತು ಜೀವ ಪ್ರಭೇದಗಳ ಮಹತ್ವ ತಿಳಿಸಬೇಕು ಎಂದರು.

ಬೆಂಗಳೂರು ವಿಶ್ವವಿದ್ಯಾಲಯ ಪ್ರಾಣಿಶಾಸ್ತ್ರ ವಿಭಾಗ 'ಜೀವವೈವಿಧ್ಯಗಳ ಅರಿವು, ರಕ್ಷಣೆ ಮತ್ತು ಉಪಯೋಗ' ಕುರಿತು ಸೋಮವಾರ ಏರ್ಪಡಿಸಿದ್ದ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಣಿಶಾಸ್ತ್ರ ವಿಭಾಗದಿಂದ ವಿವಿಧೆಡೆ ಇರುವ ಜೀವ ವೈವಿಧ್ಯಗಳ ಬಗ್ಗೆ ಸಂಶೋಧನೆ ಮಾಡಬೇಕು.



'ಜೀವವೈವಿಧ್ಯಗಳ ಅರಿವು, ರಕ್ಷಣೆ ಮತ್ತು ಉಪಯೋಗ' ಕಾರ್ಯಾಗಾರದಲ್ಲಿ ಡಾ.ಎಂ. ರಾಮಚಂದ್ರ ಮೋಹನ್, ಪ್ರೊ.ಎ.ಜೆ. ಸೋಲಮನ್ ರಾಜು, ಡಾ.ಕೆ.ವಿ. ದೇವರಾಜ್, ಡಾ.ಎನ್. ಪ್ರಭುದೇವ್, ಡಾ.ಎಂ. ಮಹಾದೇವಪ್ಪ, ಡಾ.ಟಿ.ಆರ್. ಸುಬ್ರಹ್ಮಣ್ಯ ಇದ್ದರು

ಔಷಧೀಯ ಸಸ್ಯಗಳನ್ನು ಗುರುತಿಸಬೇಕು. ವಿಭಾ ದಿಂದ ಈ ಕುರಿತು ಸ್ನಾತಕೋತ್ತರ ಡಿಪ್ಲೊಮ ಕೋರ್ಸ್ ಆರಂಭಿಸಲು ಯೋಜನೆ ಹಾಕಿಕೊಂ ರುವುದು ಮತ್ತೊಂದು ಮೈಲಿಗಲ್ಲು ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವಿಶ್ರಾ ಕುಲಪತಿ ಡಾ.ಕೆ.ವಿ. ದೇವರಾಜ್ ಮಾತನಾಡಿ, ಜ ತಿಕ ತಾಪಮಾನದಿಂದ ಜೀವ ವೈವಿಧ್ಯಗಳ ಉಳಿ ತೊಂದರೆಯಾಗುತ್ತಿದೆ. ಮಾನವನ ಸ್ವಾರ್ಥವು ಜೀ ರಾಶಿಗಳ ಉಳಿವಿಗೆ ಮಾರಕವಾಗುತ್ತಿದೆ. ಜೀವ ವೈವಿ ಗಳಿಗೆ ಪೂರಕವಾಗಿ ಆಹಾರ ಮತ್ತು ಹವಾಮ ಒದಗಿಸುವ ಕೆಲಸ ಆಗಬೇಕಿದೆ ಎಂದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯ ವಿಶ್ರಾಂತ ಕ ಪತಿ ಡಾ.ಎಂ. ಮಹಾದೇವಪ್ಪ, ಆಂಧ್ರ ವಿವಿ ಪರಿ ವಿಜ್ಞಾನ ವಿಭಾಗ ಮುಖ್ಯಸ್ಥ ಪ್ರೊ.ಎ.ಜೆ. ಸೋಲಮ ರಾಜು, ಬೆಂಗಳೂರು ವಿವಿ ರಿಜಿಸ್ಟ್ರಾರ್ ಡಾ.ಟಿ.ಆ ಸುಬ್ರಹ್ಮಣ್ಯ, ಪ್ರಾಣಿಶಾಸ್ತ್ರ ವಿಭಾಗದ ಮುಖ ಡಾ.ಎಂ. ರಾಮಚಂದ್ರ ಮೋಹನ್ ಇದ್ದರು.

ಬೆಂಗಳೂರು ವಿ.ವಿ. ಕಾರ್ಯಕ್ರಮಕ್ಕೆ ರಾಷ್ಟ್ರಪತಿಗೆ ಆಹ್ವಾನ

# ಪ್ರಾಣಿಶಾಸ್ತ್ರ ವಿಭಾಗಕ್ಕೆ ಶತಮಾನದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಏಪ್ರಿಲ್‌ನಲ್ಲಿ ನಡೆಯುವ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗದ ಶತಮಾನೋತ್ಸವ ಸಮಾರಂಭಕ್ಕೆ ರಾಷ್ಟ್ರಪತಿ ಪ್ರತಿಭಾ ಪಾಟೀಲ ಅವರನ್ನು ಆಹ್ವಾನಿಸಲಾಗುವುದು ಎಂದು ಕುಲಪತಿ ಡಾ.ಎನ್.ಪ್ರಭುದೇವ್ ತಿಳಿಸಿದರು.

ಶತಮಾನೋತ್ಸವ ಅಂಗವಾಗಿ ಹೊರ ತಂದಿರುವ ಪ್ರಾಣಿಶಾಸ್ತ್ರ ವಿಭಾಗದ ನೂತನ ಲಾಂಛನವನ್ನು ಶನಿವಾರ ಇಲ್ಲಿ ಅನಾವರಣ ಮಾಡಿ ಮಾತಮಾಡಿದ ಅವರು, ವರ್ಷಪೂರ್ತಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ, ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಒಂದು ವರ್ಷದಲ್ಲಿ ಅಂತರರಾಷ್ಟ್ರೀಯ ಮಟ್ಟದ 100 ಸಂಶೋಧನಾ ಪ್ರಬಂಧಗಳನ್ನು ಹೊರತಂದರೆ ಪ್ರಾಣಿಶಾಸ್ತ್ರ ವಿಭಾಗಕ್ಕೆ ಶೈಕ್ಷಣಿಕ ಸ್ವಾಯತ್ತತೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು. ಇಲಾಖೆಯಲ್ಲಿ ಶೇ 60ರಷ್ಟು ಹುದ್ದೆಗಳು ಖಾಲಿ ಇದ್ದು, ಇವುಗಳನ್ನು ತುಂಬಲು ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರದ ಮೇಲೆ ಒತ್ತಡ ತರಲಾಗುವುದು ಎಂದರು.

## ಕುಲಪತಿಯಿಂದ ಹೊಸ ಲಾಂಛನ ಅನಾವರಣ

ಶೈಕ್ಷಣಿಕ ಗುಣಮಟ್ಟ ವಿಷಯದಲ್ಲಿ ರಾಜಿ ಇಲ್ಲ, ಪರೀಕ್ಷೆ, ಆಡಳಿತ ಮತ್ತು ಶೈಕ್ಷಣಿಕವಾಗಿ ಸುಧಾರಣೆಗಳನ್ನು ತರಲು ಈಗಾಗಲೇ ಕ್ರಮಕೈಗೊಳ್ಳಲಾಗಿದೆ. ಪದವಿ ಮತ್ತು ಸ್ನಾತಕೋತ್ತರ ಪದವಿಯ ಪಠ್ಯಕ್ರಮ ಪರಿಷ್ಕರಣೆ ಸಂಬಂಧ ಸೆಪ್ಟೆಂಬರ್ 23ರಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಕೆ.ವಿ.ದೇವರಾಜು ಮಾತನಾಡಿ, ವಿಭಾಗವು ಶೈಕ್ಷಣಿಕವಾಗಿ ಇನ್ನಷ್ಟು ಬೆಳೆಯಬೇಕು. ಸಂಶೋಧನೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಅಭಿಪ್ರಾಯಪಟ್ಟರು. ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಂ.ರಾಮಚಂದ್ರ ಮೋಹನ ವಿಭಾಗ ಬೆಳೆದು ಬಂದ ಹಿನ್ನೆಯ ಬಗ್ಗೆ ತಿಳಿಸಿಕೊಟ್ಟರು.

ಕುಲಸಚಿವ ಸಂಜಯ್ ವೀರಸಿಂಗ್ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

---

● ಲಾಂಛನ ಬಿಡುಗಡೆ, ಅಂಚೆ ಚೀಟಿಯಲ್ಲಿ ಸ್ಥಾನ

# ಬೆಂವಿವಿ ಪ್ರಾಣಿಶಾಸ್ತ್ರ ವಿಭಾಗಕ್ಕೆ ಶತಮಾನೋತ್ಸವ ಸಂಭ್ರಮ



**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗಕ್ಕೆ ಈಗ ಶತಮಾನೋತ್ಸವ ಸಂಭ್ರಮ. ಈ ಹಿನ್ನೆಲೆಯಲ್ಲಿ ವಿಶೇಷ ಲಾಂಛನ ಮತ್ತು ವರ್ಷವಿಡೀ ನಡೆಯುವ ಕಾರ್ಯಕ್ರಮದ ವೇಳಾಪಟ್ಟಿಯನ್ನು ಕುಲಪತಿ ಡಾ। ಎನ್.ಪ್ರಭುದೇವ್ ಶನಿವಾರ ಬಿಡುಗಡೆ ಮಾಡಿದರು.

ಶತಮಾನೋತ್ಸವದ ಅಂಗವಾಗಿ ಅಂಚೆ ಇಲಾಖೆಯೊಂದಿಗೆ ಮಾತುಕತೆ ನಡೆದಿದ್ದು, ಈ ಲಾಂಛನವನ್ನೊಳಗೊಂಡ 5 ರು. ಅಂಚೆ ಚೀಟಿ ಸದ್ಯವೇ ಹೊರ ಬರಲಿದೆ. ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಭುದೇವ್, ಶತಮಾನೋತ್ಸವದ ಅಂಗವಾಗಿ ವರ್ಷವಿಡೀ ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ. 2010 ಏಪ್ರಿಲ್‌ನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿಯವರನ್ನು ಆಹ್ವಾನಿಸಲಾಗುತ್ತಿದೆ ಎಂದು ತಿಳಿಸಿದರು.

ಜಪಾನ್, ಅಮೆರಿಕ, ಇಂಗ್ಲೆಂಡ್‌ನ ವಿವಿಧ ವಿಶ್ವವಿದ್ಯಾಲಯಗಳೊಂದಿಗೆ ಶೈಕ್ಷಣಿಕ ಸಂಬಂಧ ಒಡಂಬಡಿಕೆಯನ್ನೂ ಮಾಡಿಕೊಳ್ಳಲಾಗುತ್ತಿದೆ ಎಂದು ವಿವರಿಸಿದ ಅವರು ಪ್ರತಿ ಶನಿವಾರ ಒಂದು ವರ್ಷ ವಿಚಾರ ಸಂಕಿರಣ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ವಿಜ್ಞಾನ ಶಿಕ್ಷಣ ಮತ್ತು ಪ್ರದರ್ಶನ, ಪುಸ್ತಕಗಳ ಬಿಡುಗಡೆ ಸೇರಿದಂತೆ ಬಿಡುವಿಲ್ಲದ ಕಾರ್ಯಕ್ರಮ ವೇಳಾಪಟ್ಟಿಯನ್ನು ಪ್ರಭುದೇವ್ ಪ್ರಕಟಿಸಿದರು.

ವಿಶ್ರಾಂತ ಕುಲಪತಿ ಪ್ರೊ। ಕೆ.ವಿ.ದೇವರಾಜ್, ಕುಲಸಚಿವ ಸಂಜಯ್ ವೀರ್‌ಸಿಂಗ್, ವಿಭಾಗದ ಮುಖ್ಯಸ್ಥ ಡಾ। ರಾಮಚಂದ್ರ ಮೋಹನ್ ಈ ಸಂದರ್ಭದಲ್ಲಿ ಹಾಜರಿದ್ದರು.

ಕನ್ನಡಪ್ರಭ, ಭಾನುವಾರ, 30 ಆಗಸ್ಟ್ 2009

---

ಸಂಯುಕ್ತ ಕರ್ನಾಟಕ

...ೂರು । 30 -8-2009 2

# ಏಪ್ರಿಲ್‌ನಲ್ಲಿ ಪ್ರಾಣಿಶಾಸ್ತ್ರದ ಶತಮಾನೋತ್ಸವ

ಬೆಂಗಳೂರು, ಆ. 29: ಪ್ರಾಣಿಶಾಸ್ತ್ರದ ಶತಮಾನೋತ್ಸವ ಸಮಾರಂಭವನ್ನು 2010 ರ ಏಪ್ರಿಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ. ಎನ್. ಪ್ರಭುದೇವ್ ತಿಳಿಸಿದರು.

ಶನಿವಾರ ಸೆಂಟ್ರಲ್ ಕಾಲೇಜ್‌ನಲ್ಲಿ ಹಮ್ಮಿಕೊಂಡಿದ್ದ ಪ್ರಾಣಿಶಾಸ್ತ್ರ ವಿಭಾಗದ ಶತಮಾನೋತ್ಸವ ಲಾಂಛನವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರಸಂಕಿರಣ ಮತ್ತು ಕಾರ್ಯಾಗಾರ, ವಾರಕ್ಕೊಂದು ವಿಚಾರಸಂಕಿರಣ ಮತ್ತು ವಿಜ್ಞಾನ ದಿನ, ಪುಸ್ತಕ ಬಿಡುಗಡೆ, ಪ್ರಾಣಿಶಸ್ತ್ರದಲ್ಲಾಗುವ ಹೊಸ ಆವಿಷ್ಕಾರಗಳ ಬಗ್ಗೆ ತಿಳಿಯಲು ಕಾಲೇಜು ಮತ್ತು ಶಾಲಾ ಶಿಕ್ಷಕರನ್ನು ಒಂದೆಡೆ ಸೇರಿಸುವ ಮುಂತಾದ ಅನೇಕ ಕಾರ್ಯಕ್ರಮಗಳನ್ನು ಶತಮಾನೋತ್ಸವದ ವರ್ಷದ ಆಚರಣೆಯ ಅಂಗವಾಗಿ ಆಯೋಜಿಸಲಾಗಿದೆ. ಸಮಾರಂಭವನ್ನು ಉದ್ಘಾಟಿಸಲು ಸೆ. 8 ರಂದು ಪ್ರಧಾನಿ ಮನಮೋಹನ್ ಸಿಂಗ್‌ರವರಿಗೆ ಆಮಂತ್ರಣ ಪತ್ರವನ್ನು ನೀಡಲು ನವದೆಹಲಿಗೆ ಪ್ರಯಾಣ ಬೆಳೆಸುತ್ತಿದ್ದೇನೆ ಎಂದು ತಿಳಿಸಿದರು.

ಪ್ರಾಣಿಶಾಸ್ತ್ರ ವಿಭಾಗದಲ್ಲಿ ಇಲ್ಲಿಯವರೆಗೆ 150 ಅಂತಾರಾಷ್ಟ್ರೀಯ ಮಟ್ಟದ ಸಂಶೋಧನೆಗಳು ನಡೆದಿದೆ. ಈ ವರ್ಷ 100 ಪತ್ರಿಕೆಗಳು ಅಂತಾರಾಷ್ಟ್ರೀಯ ಮಟ್ಟದ ಜರ್ನಲ್‌ನಲ್ಲಿ ಪ್ರಕಟವಾದರೆ ವಿಭಾಗಕ್ಕೆ ಅಟಾನಮಸ್ ನೀಡಲಾಗುತ್ತದೆ ಎಂದರು.

ಕೃಷಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಕೆ.ವಿ. ದೇವರಾಜ್ ಮಾತನಾಡಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಕುಲಪತಿಗಳ ಮಾರ್ಗದರ್ಶನದಲ್ಲಿ ನಿರಂತರವಾಗಿ ಸಂಶೋಧನೆ ಕೈಗೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಯುವ ವಿಜ್ಞಾನಿಗಳಾದ ಲತಾ ಎನ್ ಮತ್ತು ನೇತ್ರ ರವರಿಗೆ ಪ್ರಶಸ್ತಿ ನೀಡಲಾಯಿತು. ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ ಸಂಜಯ್ ವೀರ್‌ಸಿಂಗ್, ಪ್ರಾಣಿಶಾಸ್ತ್ರ ವಿಭಾಗದ ಅಧ್ಯಕ್ಷ ಡಾ. ಎಮ್. ರಾಮಚಂದ್ರ ಮೋಹನ್ ಮುಂತಾದವರು ಹಾಜರಿದ್ದರು.